# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 58/2025

ಪ್ರ.ವ.ಬೋ. ದಿನಾಂಕ - 06-11-2025

| | | | |
|---|---|---|---|
| ಸಾಕ್ಷಿದಾರರ ಹೆಸರು | - ನಂದನ್ | ಫ್ರಾ.ಸಾ. | _ 01 |
| ತಂದೆಯ ಹೆಸರು | - ವಿಜಯಕುಮಾರ | ಚಾ.ಸಾ. | _ 01 |
| ವಯಸ್ಸು | - 20 ವರ್ಷ | | |
| ಉದ್ಯೋಗ | - ಜೆಸಿಬಿ ಆಪರೇಟರ್ | | |
| ವಾಸ ಸ್ಥಳ | - ಆದಿವಾಲಾ, ಹಿರಿಯೂರು | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ಚಾಸಾ:9, 10 ಗೊತ್ತು. ಚಾಸಾ:10 ರವರ ಮನೆಯಲ್ಲಿ ನಾನು ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಅವರ ಹತ್ತಿರ ಜೆಸಿಬಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿ. 13.12.2024 ರಂದು ಬೆಳಿಗ್ಗೆ 8 ಗಂಟೆಗೆ ಚಾಸಾ:10 ರವರ ಜಮೀನಿನ ಪಕ್ಕ ಚಾಸಾ:2 ಕಿರಣ್ ರವರ ಜಮೀನಿಗೆ ನಾನು ಹೋಗಿದ್ದೆನು. ಅಲ್ಲಿ ನಾನು ಜೆಸಿಬಿಯಿಂದ ಬದುವು ಹಾಕುತ್ತಿದ್ದೆನು. ಬೆಳಿಗ್ಗೆ 9 ಗಂಟೆಗೆ ಚಾಸಾ:9 ರವರು ಹಸುವನ್ನು ಹೊಡೆದು ಕೊಂಡು ಅವರ ಜಮೀನಿಗೆ ಹೋದರು. ಸ್ವಲ್ಪ ಸಮಯದ ನಂತರ ಅವರ ಹಸುವೊಂದೇ ಅರಚಿಕೊಂಡು ಗೇಟಿನ ಹತ್ತಿರ ಬಂತು. ನಂತರ ನಾನು ಅದನ್ನು ಗೇಟ್ ಒಳಗೆ ಹೊಡೆದು, ವಾಪಸ್ ಜೆಸಿಬಿಯ ಹತ್ತಿರ ಹೋಗಿರುತ್ತೇನೆ. ನಂತರ ಹಸು ಮತ್ತೆ ಅರಚಿಕೊಂಡು ಜೆಸಿಬಿ ಹತ್ತಿರ ಬಂದಿರುತ್ತದೆ. ನಂತರ ನಾನು ಚಾಸಾ:9 ರವರಿಗೆ ಫೋನ್ ಮಾಡಿರುತ್ತೇನೆ. ಚಾಸಾ:1 ರವರಿಗೆ ಫೋನ್ ಮಾಡಿದಾಗ ರಿಂಗ್ ಆಗಿದ್ದು ಯಾರೂ ತೆಗೆಯಲಿಲ್ಲ. ನಂತರ 2 ನೇ ಸಲ ರಿಂಗ್ ಆಗಿ ಸ್ವಿಚ್ಆಫ್ ಆಗಿರುತ್ತದೆ. ನಂತರ ನಾನು ಚಾಸಾ:10 ರವರಿಗೆ ಫೋನ್ ಮಾಡಿ, ಹಸುವು ಅರಚಿಕೊಂಡು ಬಂದಿದ್ದು ಚಾಸಾ:9 ರವರ ಮೊಬೈಲ್ ಸ್ವಿಚ್ಆಫ್ ಆಗಿರುತ್ತದೆ ಎಂದು ಹೇಳಿರುತ್ತೇನೆ. ಅದಕ್ಕೆ ಚಾಸಾ:10 ರವರು ಜಮೀನಿಗೆ ಹೋಗಿ ನೋಡುವಂತೆ ಹೇಳಿರುತ್ತಾರೆ. ನಂತರ ನಾನು ಮುಂದುಗಡೆ ಗೇಟಿನ ಒಳಗಡೆ ಹೋಗಿ ದೀಪಾ ಅವರನ್ನು ಹುಡುಕಾಡಿರುತ್ತೇನೆ. ಆದರೆ ಅವರು ಸಿಗಲಿಲ್ಲ. ವಾಪಸ್ ಜಮೀನಿನ ಗೇಟ್ ಮುಂದೆ ಬರುವಾಗ ದೀಪಾ ಅವರು ಅವರ ಜಮೀನಿನಲ್ಲಿನ ಸೀಮೆ ಹುಲ್ಲಿನಿಂದ ಹೊರಗೆ ಬಂದು ಬಿದ್ದಿರುತ್ತಾರೆ. ದೀಪಾ ಇವರನ್ನು ನೋಡಿದಾಗ ಅವರ

ತಲೆಗೆ, ಕಣ್ಣಿಗೆ, ಮೂಗಿಗೆ ಪೆಟ್ಟಾಗಿ ರಕ್ತಗಾಯವಾಗಿರುತ್ತದೆ. ನಂತರ ಸದರಿ ವಿಷಯವನ್ನು ಚಾಸಾ:10 ರವರಿಗೆ ತಿಳಿಸಿರುತ್ತೇನೆ. ನಂತರ ಚಾಸಾ:9 ರವರನ್ನು ವಿಚಾರಿಸಿದಾಗ ಹಿಂದಿನಿಂದ ತಲೆಗೆ ಹೊಡೆದಿದ್ದು ತನ್ನ ಕೊರಳಲಿದ್ದ ಬಂಗಾರದ ಮಾಂಗಲ್ಯ ಸರ ಮತ್ತು ಮೊಬೈಲು ಇರಲಿಲ್ಲ ಎಂದು ಹೇಳಿರುತ್ತಾಳೆ. ಚಾಸಾ:9 ರವರ ತಲೆಗೆ ಹೊಡೆದಿದ್ದರಿಂದ, ತಲೆಗೆ ಏನಾಯಿತು ಎಂದು ಗೊತ್ತಾಗಲಿಲ್ಲ ಎಂದು ತಿಳಿಸಿರುತ್ತಾಳೆ. ನಂತರ ಪಕ್ಕದ ಜಮೀನಿನವರಾದ ಚಾಸಾ:11 ಅಲ್ಲಿಗೆ ಬಂದಿರುತ್ತಾರೆ. ನಂತರ ಗೇಟಿನ ಬೀಗ ಒಡೆದು, ಚಾಸಾ:9 ರವರನ್ನು ಜಮೀನಿನ ಹೊರಗೆ ಕರೆದುಕೊಂಡು ಬಂದಿರುತ್ತೇನೆ. ನಂತರ ಸದರಿ ವಿಚಾರವನ್ನು ಚಾಸಾ:10 ರವರಿಗೆ ತಿಳಿಸಿದ್ದು, ಚಾಸಾ:15, 14 ಅಲ್ಲಿಗೆ ಬಂದಿದ್ದು, ಚಾಸಾ:9 ರವರನ್ನು ಹಿರಿಯೂರಿನ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಈ ವಿಚಾರವಾಗಿ ಪೋಲಿಸರಿಗೆ ನಾನು ಹೇಳಿಕೆ ದೂರನ್ನು ನೀಡಿದ್ದು, ಅದನ್ನು ಪೋಲಿಸರು ಬರೆದುಕೊಂಡಿರುತ್ತಾರೆ. ಯಾರೋ ಕಳ್ಳರು ಚಾಸಾ:9 ರವರಿಗೆ ಹೊಡೆದು ಮಾಂಗಲ್ಯ ಸರ ಮತ್ತು ಮೊಬೈಲನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ:1 ಎಂದು, ಸಾಕ್ಷಿಯ ಸಹಿಯನ್ನು ನಿಪಿ:1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೋಲಿಸರನ್ನು ಜಮೀನಿನ ಹತ್ತಿರ ಕರೆದುಕೊಂಡು ಹೋಗಿದ್ದು, ಸ್ಥಳವನ್ನು ತೋರಿಸಿರುತ್ತೇನೆ. ಪೋಲಿಸರು ಅಲ್ಲಿ ಸ್ಥಳವನ್ನು ನೋಡಿ, ಪರಿಶೀಲನೆ ಮಾಡಿರುತ್ತಾರೆ.

(ಬೆಳಗಿನ ಕಲಾಪದ ಸಮಯ ಮುಗಿದಿದ್ದರಿಂದ ಮಧ್ಯಾಹ್ನದ ಕಲಾಪಕ್ಕೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

ಸಾಕ್ಷಿಯನ್ನು ಮಧ್ಯಾಹ್ನದ ಅವಧಿಯ ನಂತರ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರೆದ ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಜಮೀನಿಗೆ ಪೋಲಿಸರ ಜೊತೆಗೆ ಮಣ್ಣನ್ನು ತೆಗೆದುಕೊಳ್ಳಲು ಸುಕೋ ಅಧಿಕಾರಿಗಳು ಬಂದಿದ್ದರು. ಸ್ಥಳದಲ್ಲಿ ರಕ್ತ ಬಿದ್ದಿತ್ತು ಮತ್ತು ಸ್ಲಿಪರ್ ಬಿದ್ದಿದ್ದವು. ಅವುಗಳನ್ನು ಪೋಲಿಸರು ವಶಕ್ಕೆ ಪಡೆದಿರುತ್ತಾರೆ. ಪೋಲಿಸರು ಸ್ಥಳದಿಂದ ರಕ್ತ ಮಿಶ್ರಿತ ಮಣ್ಣು, ಹೊಲದಿಂದ ಮತ್ತು ಮರದ ಹತ್ತಿರದಿಂದ ಮಣ್ಣನ್ನು ಪಡೆದಿರುತ್ತಾರೆ. ಮಾದರಿ ಮಣ್ಣನ್ನು ಸಹ ಪಡೆದಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಸ್ತುಗಳನ್ನು ತೆಗೆದುಕೊಂಡು ಸೀಲ್ ಮಾಡಿರುತ್ತಾರೆ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ:2 ಎಂದು, ಸಾಕ್ಷಿಯ ಸಹಿಯನ್ನು ನಿಪಿ:2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸ್ಥಳದಲ್ಲಿ ಮಾಡಿರುತ್ತೇನೆ. ಸಾಕ್ಷಿಗೆ ಬಿಳಿ ಬಟ್ಟೆಯ ಚೀಲದಲ್ಲಿ ಸೀಲು ಮಾಡಿ ಹಾಕಿದ ವಸ್ತುಗಳನ್ನು ಸೀಲು ತೆಗೆದು ತೋರಿಸಲಾಗಿ, ಎರಡು ರಕ್ತ ಮಿಶ್ರಿತ ಮಣ್ಣು, ಮಾದರಿ ಮಣ್ಣು, ಎರಡು ಸ್ಲಿಪರ್‌ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಎಂಓ1 ರಿಂದ 5 ಎಂದು ಗುರುತಿಸಲಾಯಿತು. ಮಹಜರ ಮಾಡುವ ಸಮಯದಲ್ಲಿ ಪೋಲಿಸರು ವಿಡಿಯೋ ಮಾಡಿರುತ್ತಾರೆ. ಸದರಿ ವಿಡಿಯೋ ನೋಡಿದರೆ ಗುರುತಿಸುತ್ತೇನೆ.

\-\-\-\-\-\-\-\-\-\-\-\-\-\-\-\-\-\-\-\-\-\-\-\-

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು. )

**– ಪಾಟೀ ಸವಾಲು – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ನಾನು ಶಾಲೆಗೆ ಹೋಗುವಾಗ ಆ

**– ಪಾಟೀ ಸವಾಲು – ಆರೋಪಿಯ ಪರವಾಗಿ – ವಕೀಲರಿಂದ –**

ದಿ

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.